ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಆಹಾರದ ಬೆಲೆಗಳನ್ನು ಜಾಸ್ತಿಮಾಡಿದ್ದರಿಂದ ಬಡಜನರಿಗೆ ಬಹಳ ಕಷ್ಟವಾಗಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಸ್ವಲ್ಪಮಟ್ಟಿಗೆ ಕಷ್ಟವಾಗಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಈ ಸಂಬಂಧದಲ್ಲಿ ಸಂಸ್ಥಾನದಲ್ಲಿ ಅನೇಕ ಸಾರ್ವಜನಿಕ ಸಭೆಗಳು ಮತ್ತು ಸತ್ಯಾಗ್ರಹಗಳು ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಕಡೆ, ಕೆಲವು ಪ್ರದೇಶಗಳಲ್ಲಿ, ಆ ರೀತಿ ಸಭೆಗಳಾಗಿರತಕ್ಕದ್ದು ಗೊತ್ತಾಗಿದೆ. ಸತ್ಯಾಗ್ರಹ ಎಂಬುದು ಮೈಸೂರು ಸಂಸ್ಥಾನದಲ್ಲಿ ಒಂದೇ ಒಂದು ನಗರದಲ್ಲಿ ಮಾಡಿದ್ದು ತಿಳಿದುಬಂದಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕ್ಷಾಮ ಪ್ರದೇಶದಲ್ಲಿ ಬೆಲೆಗಳು ಜಾಸ್ತಿಯಾಗಿರುವುದರಿಂದ ಅಲ್ಲಿನ ಬಡ ಜನರು ಕೊಂಡುಕೊಳ್ಳುವುದಕ್ಕಾಗದೆ ಕಷ್ಟ ಪಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದಕ್ಕೆ ಇದೇ ಕಾರಣವಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಮದ್ರಾಸ್ ಪ್ರಾಂತದ ಕ್ಷಾಮಪೀಡಿತ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳನ್ನು ಬೆಲೆಯಲ್ಲಿ ಕಡಮೆಮಾಡಿ ಒದಗಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಬೆಲೆಗಳನ್ನು ಜಾಸ್ತಿಮಾಡಿದ ಮೇಲೆ, ರೈತರಿಂದ ಕಡಮೆ ಬೆಲೆಗೆ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಪ್ರಶ್ನೆ ಏಳುವುದಿಲ್ಲ.

Committee to examine the Foodgrain operations.

Q.—47. **Sri G. NARAYANA GOWDA** (Mulbagal—Srinivaspur).—

Will the Government be pleased to state.—

(*a*) whether they have constituted a Committee to examine the system of procurement, rationing and distribution of foodgrains now prevailing in the State;

(*b*) whether the committee made any recommendations?

A.—**Sri H. SIDDAVEERAPPA** (Minister for Home Affairs and Agriculture).—

(*a*) Yes.

(*b*) Yes.

The recent change in Food Policy as indicated in the Press Note of 10th April 1952, is based on the recommendations of the Committee.

ಶ್ರೀ ಜಿ. ನಾರಾಯಣಗೌಡರು.—ಈ ಸಮಿತಿಯು ರಚನೆಯಾಗಿದ್ದು ಯಾವಾಗ?

ಶ್ರೀ ಎಚ್. ಸಿದ್ದವೀರಪ್ಪನವರು.—7-4-1952ರಲ್ಲಿ.

ಶ್ರೀ ಜಿ. ನಾರಾಯಣಗೌಡರು.—ಈ ಸಮಿತಿಯವರು ಸ್ಟ್ಯಾಟ್ಯೂಟರಿ ರೇಷನಿಂಗ್ ಜಾರಿಯಲ್ಲಿರುವ ಪ್ರದೇಶಗಳ ವಿಷಯದಲ್ಲೇನಾದರೂ ಶಿಫಾರಸು ಮಾಡಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಮಾಡಿದ್ದಾರೆ.

ಶ್ರೀ ಜಿ. ನಾರಾಯಣಗೌಡರು.—ಆ ಶಿಫಾರಸುಗಳೇನು?

ಶ್ರೀ ಎಚ್. ಸಿದ್ದವೀರಪ್ಪನರರು.—ಸ್ಟ್ಯಾಟ್ಯೂಟರಿ ರೇಷನಿಂಗು ಈಗ ಜಾರಿಯಲ್ಲಿರುವ ಬೆಂಗಳೂರು, ಕೆ.ಜಿ.ಎಫ್, ಮೈಸೂರು, ದಾವಣಗೆರೆ ಸಿಟಿಗಳಲ್ಲಿ ಇರಬೇಕು ಮತ್ತು ಭದ್ರಾವತಿಗೂ ಕೂಡ ಅನ್ವಯಿಸಬೇಕು ಎಂದು ಶಿಫಾರಸು ಮಾಡಿದ್ದಾರೆ.

ಶ್ರೀ ಜಿ ನಾರಾಯಣಗೌಡರು.—ಉಳಿದ ಕಡೆಗಳಲ್ಲಿ ಡಿ-ಕಂಟ್ರೋಲ್‌ಮಾಡಬೇಕೆಂದೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲಿ ಡಿ-ಕಂಟ್ರೋಲ್ ಪ್ರಶ್ನೆ ಬಂದಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಡಿ-ರೇಷನ್ ಮಾಡಬೇಕೆಂದೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು.

1 P.M.

Party Clash in Bennur and Charge-sheeting the Offenders.

Q.—66. **Sri B. N. BORANNA GOWDA** (Belur).—

Will the Government be pleased to state:—

(*a*) whether it is the practice in the Police Department to send a First Information Report when a complaint is received that a crime is committed or has been committed or is likely to be committed;

(*b*) the time it takes to place a charge-sheet or to send a 'B' report after the receipt of such report;

(*c*) after how many days the charge-sheet was placed in connection with the party clash in Bennur in Belur Taluk;

(*d*) whether it is a fact that main offender or offenders have been left out in the charge-sheet that has been filed;

(*e*) the reason for the same;